(ಮಾನ್ಯ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂಭಾಗದ ಅವರಣಕ್ಕೆ ಬಂದರು)

ಉಪಾಧ್ಯಕ್ಷರು.:—ಶ್ರೀ ಪಾಟಾಳ್‌ರವರೇ, ತಾವು ದಯಮಾಡಿ ತಮ್ಮ ಜಾಗಕ್ಕೆ ಹೋಗಿ ಕುಳಿತು ಕೋಳ್ಳಿ. ನಾನು ಹೇಳುತ್ತೇನೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೇಡಿಕೆಯನ್ನು ಮಂಡಿಸಿದ ಕೂಡಲೇ ಹೀಗೆ ಒಳಗಡೆ ಬಂದರೆ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಉತ್ತರ ನಿರೀಕ್ಷೆ ಮಾಡಬೇಕಾದರೂ ಸ್ವಲ್ಪ ಕಾಲ ಬೇಕಾಗುತ್ತದೆ. ನೀವು ಅಲ್ಲಿ ಹೇಳಿದ ತಕ್ಷಣವೇ ಬಾವಿಗೆ ಬಂದುಬಿಟ್ಟರೆ ನಾವು ಏನು ಮಾಡಬೇಕು ?

ಉಪಾಧ್ಯಕ್ಷರು.—ಪಾಟಾಳ್ ನಾಗರಾಜ್‌ರವರೇ, ತಾವು ತಮ್ಮ ಸೀಟಿಗೆ ಹೋಗಿ. ಸಂಬಂಧಪಟ್ಟ ಮಂತ್ರಿಗಳನ್ನು ಕರೆಸುತ್ತೇನೆ. ಮಧ್ಯಾಹ್ನ ಊಟದ ನಂತರ ಕರೆಯಿಸಿ ನಿಮಗೆ ಉತ್ತರ ಕೊಡಿಸುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆದ್ದರಿಂದ, ತಾವು ಸ್ವಲ್ಪ ಕಾಲಾವಕಾಶವನ್ನು ಕೊಟ್ಟರೆ ಈ ದಿವಸ ಸಮಾಲೋಚನೆ ಮಾಡಿ, ಇವತ್ತಿನ ಅವಧಿಯೊಳಗಾಗಿ ನಾನು ತಿಳಿಸುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಐದು ಗಂಟೆಯೊಳಗಾಗಿ ಉತ್ತರ ಕೊಡಿಸುತ್ತೀರಾ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಯ್ಯೋರಾಮ, ಐದು ಗಂಟೆಯೊಳಗಾಗಿ ಎಂದರೆ, ಇದು ಐದು ಗಂಟೆಗೇ ಪೂರೈಸುತ್ತದೋ, ಆರು ಗಂಟೆಗೆ ಆಗುತ್ತದೋ, ಇನ್ನು ಮುಂಜಿಯೇ ಆಗುತ್ತದೋ ಎಂಬುದು ಗೊತ್ತಿಲ್ಲ.

ಉಪಾಧ್ಯಕ್ಷರು.—ಸಂಬಂಧಪಟ್ಟವರನ್ನು ನಾನು ಕರೆಸುತ್ತೇನೆ. ತಾವು ದಯಮಾಡಿ ತಮ್ಮ ಜಾಗಕ್ಕೆ ಹೋಗಿ.

ಶ್ರೀ ಪಾಟಾಳ್ ನಾಗರಾಜ್.—ಹಾಗಾದರೆ ಉತ್ತರ ಕೊಡಿ ಸ್ವಾಮಿ.

(ಮಾನ್ಯ ಸದಸ್ಯರಾದ ಶ್ರೀ ಪಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ವಿವಾಹಿತ ಹೆಣ್ಣು ಮಂಗಳನ್ನು ಅಪಹರಿಸಿಕೊಂಡು ಹೋಗಿರುವ ಬಗ್ಗೆ

†SR. QUMARUL ISLAM.—Sir, in my constituency, a lady by name Smt. Kavita, who was married just 15 days back has been kidnapped on 19th She is a student of B.A. II. She had been to the college to collect her Hall Ticket. She is the wife of one Engineering student Mr. Sunil Deshpande. She was kidnapped near Tirandaz Talkies which is called Jagat area. The Hon. Minister knows that area very well. When she had gone to collect the Hall Ticket or the TC, she was kidnapped.

MR. DEPUTY SPEAKER.—By whom ?

SRI QUMARUL ISLAM.—Had, I known whom, I would not have raised this matter. Sir, when the complaint was lodged in the Ashoknagar Police Station and Brahampura Police Station people have treated this matter very lightly. They told that she is adult and what can we do. They have not at all investigated this matter till today. Their parents and relatives personally went to the

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

Superintendent of Police and expressed their apprehension as to whether she is alive or dead because she was wearing gold ornaments worth of 10-12 tolas while she was kidnapped. The Police had not bothered to arrest anyone in this behalf. Nothing has come out. The Police is not doing anything for the protection of the people in my district. You are aware that dnring day-light one Mr. Shankarrao Pati was murdered. In another case, one dead body was lying on the road in Afzalpur, Eevn in Shahabad. the same thing has happened. Such incidents in Gulbarga have become routine. I would request the Goveanment to direct the Police to investigate into this matter and before the end of this session, I want an assurance and statement from the Government that the kidnapped girl Smt. Kavita is restored to her parents. I want the Governme it to immediately direct the Police to investigate into the matter very seriously. This is really a serious matter.

ಶ್ರೀ ವಾಟಾಳ್ ನಾಗರಾಜ್.—ಈ ವಿಚಾರದಲ್ಲಿ ಇದುವರೆಗೆ ತನಿಖೆ ನಡೆದಿಲ್ಲ. ಆಕೆ ಏನಾಗಿದ್ದಾರೆ, ಎಲ್ಲಿದ್ದಾರೆ ಎಂದು ಗೊತ್ತಿಲ್ಲ, ಪೋಲೀಸರ ಕ್ರಮ ಇದುವರೆಗೂ ನಡೆದಿಲ್ಲ. ಈ ಪರಿಸ್ಥಿತಿಯಲ್ಲಿ ಈ ಪ್ರಶ್ನೆಯನ್ನು ನಾವು ಯಾರ ಮುಂದೆ ಹೇಳಬೇಕು? ಪೋಲೀಸ್ ಇಲಾಖೆ ಈ ಬಗ್ಗೆ ಜವಾಬ್ದಾರಿ ವಹಿಸಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದದ್ದು. ಆದರೆ ಇದುವರೆಗೂ ಅವರಿಂದ ಒಂದು ಕಂಪ್ಲೇಂಟ್ ತೆಗೆದುಕೊಂಡಿಲ್ಲ, ಏನಾಗಿದೆ ಎಂದು ಹೇಳಲ್ಲ. ಎಲ್ಲಿ ಹೋಗಿದ್ದಾರೆ ಎಂದು ಹೇಳಿಲ್ಲ.

ಉಪಾಧ್ಯಕ್ಷರು.—ಅವರು ಹೇಳುತ್ತಿದ್ದಾರೆ, ಕಂಪ್ಲೇಂಟ್ ತೆಗೆದುಕೊಂಡಿದ್ದಾರೆ, ಆದರೆ ತನಿಖೆ ಮಾಡಿಲ್ಲ ಎಂದು.

ಶ್ರೀ ವಾಟಾಳ್ ನಾಗರಾಜ್.—ಕಂಪ್ಲೇಂಟ್ ತೆಗೆದುಕೊಂಡಿದ್ದಾರೆ. ಆದರೆ ತನಿಖೆ ಮಾಡಿಲ್ಲ. ಇದುವರೆಗೂ ತನಿಖೆಗೆ ಕ್ರಮವನ್ನೇ ಕೈಗೊಂಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀ ಖಮರುಲ್ ಇಸ್ಲಾಂ ಅವರು ಸದನದ ಗಮನಕ್ಕೆ ತಂದಿದ್ದಾರೆ. ಕಂಪ್ಲೇಂಟ್ ಕೊಟ್ಟು ಸುಮಾರು ಐದಾರು ದಿವಸ ಆಯಿತು ಕಂಪ್ಲೇಂಟ್ ಕೊಟ್ಟಮೇಲೂ ಕೂಡ ಪೋಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ನಾನೂ ಕೂಡ ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

೧೨-೫೦ ಪಿ. ಎಂ.

ತರುತ್ತೇನೆ. ಮತ್ತು ನಾನು ಖುದ್ದಾಗಿ ಎಸ್. ಪಿ. ಯವರ ಜೊತೆ ಮಾತನಾಡಿ, ಅದು ಯಾವ ಹಂತದಲ್ಲಿದೆ ಮತ್ತು ಯಾವ ಕಾರಣಕ್ಕಾಗಿ ಈ ರೀತಿಯಾಗಿದೆ ಎಂಬುದರ ಬಗ್ಗೆ ನಾನು ಅವರಿಗೆ ವೈಯುಕ್ತಿಕವಾಗಿ ತಿಳಿಸುತ್ತೇನೆ ಮುಂದಿನ ಕ್ರಮಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರಿಗೂ ಹೇಳುತ್ತೇನೆ.

(೩) ಖಾಸಗಿ ಶಾಲೆಯ ನೌಕರರಿಂದ ಉಪವಾಸ ಸತ್ಯಾಗ್ರಹ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದೇನೆಂದರೆ ಖಾಸಗಿ ಶಾಲೆಯ ಕರ್ನಾಟಕ ರಾಜ್ಯ ನೌಕರರ ಸಂಘದವರು ಸುಮಾರು ಒಂದು ತಿಂಗಳಿನಿಂದ ಕಬ್ಬನ್‌ಪಾರ್ಕ್‌ನಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದುವರೆಗೂ ಯಾರೊಬ್ಬರು ಅಲ್ಲಿಗೆ ಹೋಗಿ ವಿಚಾರ ಮಾಡಿಲ್ಲ. ಈ ನಾಗಲೇ ಸತ್ಯಾಗ್ರಾಹಿಗಳಲ್ಲಿ ಕೆಲವು ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದಾರೆ. ಅನೇಕ ಜನರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಸರ್ಕಾರವಾಗಲೀ, ಮಂತ್ರಿಗಳಾಗಲೀ, ಅಧಿಕಾರಿಗಳಾಗಲಿ ಅಲ್ಲಿಗೆ ಹೋಗಿ, ನಿಮ್ಮ ಪರಿಸ್ಥಿತಿ ಏನು ಬೇಡಿಕೆಗಳೇನು ಎಂದು ಕೇಳುವಷ್ಟು ಸೌಜನ್ಯವನ್ನು ಇನ್ನೂ ತನಕವರೆಗೂ ಮಾಡಿಲ್ಲ. ಈ ನೌಕರರ ಪ್ರತಿನಿಧಿಗಳನ್ನು ತಾವು ಕರೆಸಿ ಮಾತನಾಡಬೇಕೆಂದು ಸರ್ಕಾರಕ್ಕೆ ತಾವು ಆದೇಶ ಕೊಡಬೇಕೆಂದು ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಇವರ ಬಗ್ಗೆ ಹಾಗೂ ಎಲೆಕ್ಟ್ರಿಸಿಟಿ ಬಗ್ಗೆ ಇವತ್ತಿನ ಸಾಯಂಕಾಲದ ಒಳಗೆ ಉತ್ತರ ಕೊಡಿಸುತ್ತೇನೆ.